ಶ್ರೀ ಜಗದೀಶ್ ಶೆಟ್ಟರ್(ಹುಬ್ಬಳ್ಳಿ ಗ್ರಾಮೀಣ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯಪಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ದಕ್ಷಿಣ(ಅಪರ) ತಾಲ್ಲೂಕು ಕೆ.ಆರ್.ಪುರ ಹೋಬಳಿ, ಭೈರಸಂದ್ರ ಗ್ರಾಮದ ಸರ್ವೆ ನಂಬರ್ ೫೦:೨ರಲ್ಲಿ ಸರ್ಕಾರಿ ಜಮೀನನ್ನು ಅಕ್ರಮವಾಗಿ ಖಾತೆ ಮಾಡಿ ಖಾಸಗಿಯವರಿಗೆ ನೀಡಿರುವುದು ನಿಜವೇ; (ಏವರ ನೀಡುವುದು)

ಆ) ಹಾಗಿದ್ದಲ್ಲಿ ಎಷ್ಟು ಎಕರೆ ಜಮೀನನ್ನು ಈ ರೀತಿ ಪರಭಾರೆ ಮಾಡಲಾಗಿದೆ?

ಇ) ಈ ಜಮೀನಿನಲ್ಲಿ ಅಪಾರ್ಟ್‌ಮೆಂಟ್ ಕಟ್ಟುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಈ) ಈ ರೀತಿ ಅಪಾರ್ಟ್‌ಮೆಂಟ್ ಕಟ್ಟುತ್ತಿರುವವರ ಅಕ್ರಮ ದಾಖಲೆಗಳನ್ನು ರದ್ದುಗೊಳಿಸಿ ಈ ಸ್ವತ್ತನ್ನು ಸರ್ಕಾರ ಸ್ವಾಧೀನಪಡಿಸಿಕೊಳ್ಳಬಹುದಲ್ಲವೇ?

ಉ) ಈ ರೀತಿ ಸರ್ಕಾರಿ ಜಮೀನನ್ನು ಅಕ್ರಮವಾಗಿ ಖಾಸಗಿಯವರಿಗೆ ದಾಖಲೆಗಳಲ್ಲಿ ನಮೂದು ಮಾಡಿ ಸರ್ಕಾರಕ್ಕೆ ವಂಚಿಸಿರುವ ಅಧಿಕಾರಿಗಳ ವಿರುದ್ಧ ಕೈಗೊಂಡಿರುವ ಕ್ರಮಗಳೇನು?

ಶ್ರೀ ಹೆಚ್.ಸಿ.ಶ್ರೀಕಂಠಯ್ಯ (ಕಂದಾಯ ಸಚಿವರು):

ಅ) ಭೈರಸಂದ್ರ ಗ್ರಾಮದ ಸರ್ವೆ ನಂ:50:2ರಲ್ಲಿ ಶ್ರೀಮತಿ.ಸೊಣ್ಣಮ್ಮನವರಿಗೆ 1.38 ಎಕರೆ ಅಕ್ರಮ ಖಾತೆಯಾಗಿದೆ.

ಆ) 0.38 ಎಕರೆ.

ಇ) ಹೌದು

ಈ) ಹೌದು ಸ್ವಾಧೀನಪಡಿಸಿಕೊಳ್ಳಲಾಗಿದೆ.

ಉ) ಆರ್ ಆರ್ ಶಿರಸ್ತೇದಾರ್ ಹಾಗೂ ಗ್ರಾಮ ಲೆಕ್ಕಿಗರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಾಗುತ್ತಿದೆ.

ಬೆಂಗಳೂರು ದಕ್ಷಿಣ ತಾಲ್ಲೂಕಿನ ಉತ್ತರಹಳ್ಳಿ ಹೋಬಳಿಯಲ್ಲಿ ಕಾನೂನು ಬಾಹಿರ ಸರ್ಕಾರಿ ಜಮೀನಿನ ಒತ್ತುವರಿ.

2061(2515)

ಶ್ರೀ ಜಗದೀಶ್ ಶೆಟ್ಟರ್(ಹುಬ್ಬಳ್ಳಿ ಗ್ರಾಮೀಣ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ ಹೋಬಳಿ ಸ.ನ.87 ಮತ್ತು 88ರಲ್ಲಿ ಯಾವ ಗೃಹ ನಿರ್ಮಾಣ ಸಹಕಾರ ಸಂಘಕ್ಕಾಗಿ ಜಮೀನನ್ನು ವಶಪಡಿಸಿಕೊಳ್ಳಲಾಗಿದೆ; ಮತ್ತು ಎಷ್ಟು ಜಮೀನನ್ನು ವಶಪಡಿಸಿಕೊಳ್ಳಲಾಗಿದೆ; ಯಾರಿಂದ ವಶಪಡಿಸಿಕೊಳ್ಳಲಾಗಿದೆ?

ಆ) ಖಾಸಗಿಯವರಿಂದ ವಶಪಡಿಸಿಕೊಂಡ ಜಮೀನನ್ನು ಸಹಕಾರ ಸಂಘಕ್ಕೆ ವಹಿಸಿಕೊಡುವಾಗ ಆ ಜಮೀನನ್ನು ಮೂಲ ಮಾಲೀಕರಿಗೆ ನೀಡಿ ಅಕ್ರಮ ಎಸಗಿದ್ದಲ್ಲದೆ, ಪಕ್ಕದ ಸರ್ಕಾರಿ ಜಮೀನಿನ (ಖರಾಬು ಜಮೀನು) ದಾಖಲೆಗಳನ್ನು ತಿದ್ದಿ ಕಾನೂನುಬಾಹಿರವಾಗಿ ಸ್ವಾಧೀನಪಡಿಸಿಕೊಂಡಿರುವುದು ನಿಜವೆ? (ವಿವರ ನೀಡುವುದು).

ಇ) ಹಾಗಿದ್ದಲ್ಲಿ ಮಾರಿದ್ದ ಜಮೀನನ್ನು ಈ ರೀತಿ ಹಿಂದಕ್ಕೆ ಪಡೆದ ಮಾಲೀಕರ ಹೆಸರೇನು?

ಈ) ಈ ಅಕ್ರಮಕ್ಕೆ ಕಾರಣವಾದ ಭೂಸ್ವಾಧೀನಾಧಿಕಾರಿಗಳು ಯಾರು? ಈ ಅವ್ಯವಹಾರಕ್ಕಾಗಿ ಸರ್ಕಾರ ಆ ಅಧಿಕಾರಿಯ ಮೇಲೆ ಕೈಗೊಂಡಿರುವ ಕ್ರಮಗಳೇನು?

ಶ್ರೀ ಹಚ್.ಸಿ.ಶ್ರೀಕಂಠಯ್ಯ (ಕಂದಾಯ ಸಚಿವರು):

ಅ) ಉತ್ತರಹಳ್ಳಿ ಗ್ರಾಮದ ಸ.ನಂ.87 ಮತ್ತು 88ರಲ್ಲಿ ಜಮೀನನ್ನು ಭಾರತ್ ಗೃಹ ನಿರ್ಮಾಣ ಕೊ-ಆಪರೇಟಿವ್ ಸೊಸೈಟಿ ಪರವಾಗಿ ವಶಪಡಿಸಿಕೊಳ್ಳಲಾಗಿದೆ. ಸ.ನಂ.87ರಲ್ಲಿ 20-01 ಮತ್ತು 88ರಲ್ಲಿ 29-33 ಎಕರೆ ಒಟ್ಟು 49-34 ಎಕರೆ ಜಮೀನನ್ನು ವಶಪಡಿಸಿಕೊಳ್ಳಲಾಗಿದೆ. ಈ ಜಮೀನನ್ನು ಬಲ್ಯೋಟ ಕುಟುಂಬದವರಿಂದ ವಶಪಡಿಸಿಕೊಳ್ಳಲಾಗಿದೆ.

ಆ) ಸದರಿ ಸಹಕಾರ ಸಂಘಕ್ಕೆ ವಹಿಸಿಕೊಟ್ಟ ಜಮೀನನ್ನು ಮೂಲ ಮಾಲೀಕರಿಗೆ ಸ್ವಾಧೀನ ಉಳಿಸಿಕೊಟ್ಟಿರುವುದಿಲ್ಲ. ಭೂಸ್ವಾಧೀನ ಪ್ರಕ್ರಿಯೆ ನಡೆದ ಸಮಯದಲ್ಲಿ ಅಂದು ಲಭ್ಯವಿದ್ದ ಭೂದಾಖಲೆಗಳನ್ವಯ ಭೂಸ್ವಾಧೀನಪಡಿಸಿಕೊಳ್ಳಲಾಗಿದೆ. ಭೂ ಸ್ವಾಧೀನ ಪ್ರಕ್ರಿಯೆ ಮುಗಿದ ಸುಮಾರು 3-4 ವರ್ಷಗಳ ನಂತರ ಸದರಿ ಸರ್ವೆ ನಂಬರಿನಲ್ಲಿರುವ ಖರಾಬು ಜಮೀನಿಗೆ ವಿವಾದವು ಉಂಟಾಗಿ ಭೂಸ್ವಾಧೀನಪಡಿಸಿಕೊಳ್ಳಲಾದ ಖರಾಬು ಜಮೀನಿನಲ್ಲಿ ಎ ಮತ್ತು ಬಿ ಖರಾಬು ಇದ್ದು, ಎ ಖರಾಬ್‌ಗೂ ಕೂಡ ಭೂಮಾಲೀಕರಿಗೆ ಪರಿಹಾರ ಪಾವತಿಸಲಾಗಿದೆ ಎಂದು ಮತ್ತು ಭೂಮಾಲೀಕರು ಖರಾಬು ಸೇರಿ ಜಮೀನನ್ನು ಕ್ರಯಕ್ಕೆ ಪಡೆದಿರುವ ಬಗ್ಗೆ ದಾಖಲೆಗಳು ದೃಢಪಡಿಸದ ಕಾರಣ ಮತ್ತು ಖರಾಬು ಜಮೀನು ಸರ್ಕಾರಕ್ಕೆ ಸೇರಬೇಕಾದ್ದು ಎಂದು ಕಂಡು ಬಂದ ಕಾರಣ ಒಟ್ಟು 26 ಎಕರೆ 33 ಗುಂಟೆ ಜಮೀನನ್ನು ಹಾಲಿ ಭೂಸ್ವಾಧೀನ ನಡವಳಿಕೆಯಿಂದ

ರದ್ದುಪಡಿಸುತ್ತಾ ದಿನಾಂಕ 29.5.97ರಂದು ಅಧಿಸೂಚನೆ ಹೊರಡಿಸಿ ಸರ್ಕಾರದ ವಶಕ್ಕೆ ತೆಗೆದುಕೊಳ್ಳಲು ಆದೇಶಿಸಲಾಯಿತು. ಈ ಕ್ರಮವನ್ನು ಸಂಘವು ರಿಟ್ ಅರ್ಜಿ 15397:97ರಲ್ಲಿ ಪ್ರಶ್ನಿಸಿದ್ದು ಉಚ್ಚನ್ಯಾಯಾಲಯದ ಆದೇಶದ ಮೇರೆಗೆ ವಿಚಾರಣೆ ನಡೆಸಿ ವರದಿಸಲು ಬೆಂಗಳೂರು ವಿಭಾಗಾಧಿಕಾರಿಗಳನ್ನು ನೇಮಿಸಲಾಗಿತ್ತು. ವಿಭಾಗಾಧಿಕಾರಿಗಳು ವಿಚಾರಣೆ ನಡೆಸಿ ಸರ್ಕಾರಕ್ಕೆ ದಿನಾಂಕ 27.3.98ರಂದು ವರದಿ ಸಲ್ಲಿಸಿರುತ್ತಾರೆ. ವರದಿಯನ್ವಯ ಸರ್ಕಾರಿ ಮಟ್ಟದಲ್ಲಿ ಪುನಃ ವಿಚಾರಣೆ ನಡೆಸಿ ಖರಾಬು ಜಮೀನಿಗೆ ಭೂಮಾಲೀಕರು ಪಡೆದಿರತಕ್ಕ ಪರಿಹಾರ ಮೊಬಲಗು ವಸೂಲಾತಿಗೆ ಕ್ರಮ ತೆಗೆದುಕೊಳ್ಳಲು ಸೂಚಿಸಿದ್ದು, ಹಾಗೂ ಸದರಿ ಜಮೀನನ್ನು ಸಂಘಕ್ಕೆ ಬೇಕಾಗಿದ್ದಲ್ಲಿ ಕಿಮ್ಮತ್ತಿನ ಮೇರೆಗೆ ಮಂಜೂರು ಮಾಡಲು ಕ್ರಮ ತೆಗೆದುಕೊಳ್ಳುವಂತೆ ದಿನಾಂಕ 30.9.98ರಂದು ಆದೇಶವಾಗಿರುತ್ತದೆ. ಸರ್ಕಾರವು ಕೈಗೊಂಡ ಈ ಆದೇಶವನ್ನು ಸದರಿ ಸಂಘ ಹಾಗೂ ಭೂಮಾಲೀಕರು ಉಚ್ಚ ನ್ಯಾಯಾಲಯದಲ್ಲಿ ಪ್ರಶ್ನಿಸಿದ್ದು ಅರ್ಜಿಗಳನ್ನು ಪುರಸ್ಕರಿಸುತ್ತಾ ದಿನಾಂಕ 5.12.2000ರ ತನ್ನ ಆದೇಶದಲ್ಲಿ ಸರ್ಕಾರದ ಆದೇಶವನ್ನು ಅಸೂರ್ಜಿತಗೊಳಿಸಿದೆ. ನ್ಯಾಯಾಲಯದ ದಿನಾಂಕ 5.12.00ರ ಆದೇಶದ ಮೇರೆಗೆ ಸರ್ಕಾರವು ಅಪೀಲು ಸಲ್ಲಿಸಲು ಕ್ರಮ ಜರುಗಿಸಲಾಗಿದೆ. ಕಾನೂನು ಬಾಹಿರವಾಗಿ ಯಾವ ಜಮೀನನ್ನು ಭೂಸ್ವಾಧೀನಪಡಿಸಿಕೊಂಡಿರುವುದಿಲ್ಲ.

ಇ) ಭೂಸ್ವಾಧೀನದ ಪ್ರಕ್ರಿಯೆಯು ಅಂತಿಮಗೊಂಡಿರುವ ಕಾರಣ ಭೂಮಾಲೀಕರಿಗೆ ಜಮೀನನ್ನು ಹಿಂದಕ್ಕೆ ನೀಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಲಭ್ಯವಿರುವ ದಾಖಲಾತಿಗಳ ಮೇರೆಗೆ ಶ್ರೀ ಭರತ್‌ಕುಮಾರ್‌ರವರು ಈ ಭೂ ಸ್ವಾಧೀನ ಪ್ರಕ್ರಿಯೆಗಳನ್ನು ನಿರ್ವಹಿಸಿರುತ್ತಾರೆ. ಮ್ಯುಟೇಷನ್ ದೃಢೀಕರಿಸಿರುವ ಕಂದಾಯ ನಿಬ್ಬಂದಿಗಳ ಪೈಕಿ ಕೆಲವರು ನಿವೃತ್ತಿ ಹೊಂದಿದ್ದಾರೆ ಮತ್ತೆ ಕೆಲವರು ಮೃತಪಟ್ಟಿರುತ್ತಾರೆ. ಆದುದರಿಂದ ತನಿಖೆಗೆ ಕ್ರಮ ಜರುಗಿಸಲು ಸಾಧ್ಯವಾಗಿಲ್ಲ.

ಉಡುಪಿ ಜಿಲ್ಲೆಯಲ್ಲಿ ಹೊಸ ತಾಲ್ಲೂಕುಗಳನ್ನು ರಚಿಸುವ ಕುರಿತು.

2064(1881)

ಜಯಪ್ರಕಾಶ್ ಹೆಗಡೆ ಕೆ.(ಬ್ರಹ್ಮಾವರ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ರಾಜ್ಯದಲ್ಲಿ ನೂತನವಾಗಿ ಘೋಷಿತವಾದ ಜಿಲ್ಲೆಗಳಲ್ಲಿ ಎಷ್ಟು ಹೊಸ ತಾಲ್ಲೂಕುಗಳನ್ನು ರಚಿಸುವ ಯೋಜನೆ ಸರಕಾರದ ಮುಂದಿದೆ: ಅವುಗಳ ವಿವರಗಳೇನು: